ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.1684/2022 CW-21 PW-5

| | | |
|---|---|---|
| ಹೆಸರು | : | ಸೌಮ್ಯ |
| ಗಂಡನ ಹೆಸರು | : | ಮಹೇಶ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪಿಎಸ್ ಐ |
| ವಾಸಸ್ಥಳ | : | ಶಕ್ತಿನಗರ ರಾಯಚೂರು |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 04-07-2023

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ದಿಃ 04-10-2021 ರಿಂದ ಜೂನ್ 2023 ರವರೆಗೆ ಸಿಂಧನೂರು ನಗರ ಪೋ.ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 14-01-2022 ರಂದು ಚಾಸಾ-23 ರವರು ನನಗೆ 1 ನೇ ಆರೋಪಿಯನ್ನು ಪತ್ತೆ ಮಾಡಿ ಕರೆದುಕೊಂಡು ಬರುವಂತೆ ತಿಳಿಸಿದರು. ಅದರಂತೆ ನಾನು ದಿಃ 17-01-2022 ರಂದು ರಾತ್ರಿ 12-00 ಗಂಟೆ ಸುಮಾರಿಗೆ ಚಾಸಾ-16 ರಿಂದ 19 ರವರೊಂದಿಗೆ ಒಂದು ಖಾಸಗಿ ವಾಹನದಲ್ಲಿ ಬಳ್ಳಾರಿಗೆ ಹೋಗಿದ್ದೆ. 1 ನೇ ಆರೋಪಿಯು ಬಳ್ಳಾರಿಯ ಕೌಲ ಬಜಾರ ಪೋ.ಠಾಣೆಯ ಎಮ್ ಓ ಬಿ ಇದ್ದ. ಆ ಠಾಣೆಗೆ ಭೇಟಿ ನೀಡಿ ಎಮ್ ಓ ಬಿ ಕಾರ್ಡ್ ನ್ನು ಪರೀಶೀಲಿಸಿದೆ. 1 ನೇ ಆರೋಪಿಯ ವಿಳಾಸ ತಾಳುರ ರಸ್ತೆ ಹರಿಶ್ಚಂದ್ರದಲ್ಲಿ ಇರುತ್ತಾರೆ ಎಂದು ಗೊತ್ತಾಯಿತು. ಅಲ್ಲಿ ಬೆಳಗಿನ ಜಾವ 5-00 ಗಂಟೆಗೆ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿ ಮನೆಯಿಂದ ತನ್ನ ಕೈಯಲ್ಲಿ ಒಂದು ಕವರ ಹಿಡಿದುಕೊಂಡು ಬಂದನು. ಆತನನ್ನು ಹಿಡಿದುಕೊಂಡು ವಿಚಾರ ಮಾಡಲಾಗಿ 1 ನೇ ಆರೋಪಿ ಎಂದು ಗೊತ್ತಾಯಿತು. ಆತನ ವಶದಲ್ಲಿದ್ದ ಕವರನಲ್ಲಿ ಏನು ಇದೆ ಎಂದು ವಿಚಾರ ಮಾಡಲಾಗಿ ಅದರಲ್ಲಿ ಕಳ್ಳತನ ಮಾಡಿದ ಆಭರಣಗಳು ಇದ್ದವು ಅವುಗಳನ್ನು ಮಾರಾಟ ಮಾಡಲು ಹೊರಟಿದ್ದೇನೆ ಎಂದು ತಿಳಿಸಿದ. ಆತನನ್ನು ಬೆಳಗಿನ ಜಾವ 5-30 ಗಂಟೆಗೆ ನಮ್ಮ ವಶಕ್ಕೆ ಪಡೆದುಕೊಂಡು ಚಾಸಾ-23 ರವರ ಮುಂದೆ ತಂದು ಹಾಜರಪಡಿಸಿದೆ. ಈ ಬಗ್ಗೆ ನಾನು ತನಿಖಾಧಿಕಾರಿಗೆ ವರದಿ ನೀಡಿರುತ್ತೇನೆ. ಸಾಕ್ಷಿಯು ಆ ವರದಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿ ಪರ ವಕೀಲರಿಂದ</u>

ನಾವು ತೆಗೆದುಕೊಂಡು ಹೋದ ವಾಹನ ಸಂಖ್ಯೆ ಅದರ ಮಾಲೀಕರು ಮತ್ತು ಚಾಲಕರು ಯಾರು ಇದ್ದರು ಎಂದು ಅವಸರದಲ್ಲಿ ಕರೆದುಕೊಂಡು ಹೋಗಿದ್ದರಿಂದ ನನಗೆ ನೆನಪಿಲ್ಲ. ನಾವು ಒಂದು ಕಾರನ್ನು ತೆಗೆದುಕೊಂಡು ಹೋಗಿದ್ದೆವು. ಬಳ್ಳಾರಿಗೆ ಹೋದಾಗ ಬೆಳಗಿನ ಜಾವ 2-00 ಗಂಟೆ ಆಗಿತ್ತು. ಕೌಲ ಬಜಾರ ಪೋ.ಠಾಣೆಯ ಯಾವ ಅಧಿಕಾರಿಯಿಂದ 1 ನೇ ಆರೋಪಿಯ ಎಮ್ ಓ ಬಿ ಕಾರ್ಡ್ ನ್ನು ಪರೀಶೀಲಿಸಿದೆ ಎಂದರೆ, ಅವರ ಹೆಸರು ಗೊತ್ತಿಲ್ಲ, ಆದರೆ ಆ ಠಾಣೆಯ ಪ್ರಭಾರದಲ್ಲಿದ್ದ ಅಧಿಕಾರಿಯಿಂದ ತಿಳಿದುಕೊಂಡಿದ್ದೇನೆ. ಕೌಲ ಬಜಾರ ಪೋ.ಠಾಣೆಯಲ್ಲಿರುವ ಭೇಟಿ ನೀಡುವ ವಹಿಯಲ್ಲಿ ನಾನು ಸಹಿ ಮಾಡಿಲ್ಲ. ಈ ಹಿಂದೆ ನಾನು ಬಳ್ಳಾರಿಯಲ್ಲಿ ಕೆಲಸ ಮಾಡಿರುವುದರಿಂದ ಹರಿಶ್ಚಂದ್ರ ನಗರ ಬಗ್ಗೆ ನನಗೆ ಗೊತ್ತಿತ್ತು. ಹರಿಶ್ಚಂದ್ರ ನಗರ ನಾನು ಕರ್ತವ್ಯ ನಿರ್ವಹಿಸಿದ ಪೋ.ಠಾಣೆ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲ ಎಂದರೆ ಸರಿ. ಹರಿಶ್ಚಂದ್ರ ನಗರ ಗಾಂಧಿನಗರ ಪೋ.ಠಾಣೆ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ ಅಲ್ಲ.

ಸಾಮಾನ್ಯವಾಗಿ ಜನ ಬೆಳಗಿನ ಜಾವ 5-00 ಗಂಟೆಗೆ ಮನೆಯಿಂದ ಹೊರಗೆ ಬರುತ್ತಾರೆ ಎಂದರೆ ಸರಿ ಅಲ್ಲ. ಯಾವುದೋ ಒಂದು ಮನೆಯ ಮುಂದೆ ನಿಂತು ಗಮನಿಸುತ್ತಿದ್ದೆವು, ಅದು ಯಾರ ಮನೆ ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಹಿಡಿದುಕೊಂಡ ಬಂದ ಕವರ ಕರಿ ಬಣ್ಣದ್ದು ಇತ್ತು. ಆ ಕರಿ ಬ್ಯಾಗನಲ್ಲಿ ಯಾವ ಯಾವ ವಸ್ತುಗಳು ಇದ್ದವು ಎಂದು ಸ್ವಲ್ಪ ಕತ್ತಲೆ ಇದ್ದರಿಂದ ನಾನು ನೋಡಲಿಲ್ಲ, ಆದರೆ ಬಂಗಾರದ ಆಭರಣಗಳು ಇದ್ದವು. ಆ ಕವರನಲ್ಲಿ ಸ್ವಲ್ಪ ನಗದು ಹಣ ಮತ್ತು ಆಭರಣಗಳು ಇದ್ದವು ಎಂದು ನನ್ನ ವರದಿಯಲ್ಲಿ ನೀಡಿದ್ದೇನೆ. ಎಷ್ಟು ಹಣ ಇತ್ತು ಎಂದು ಎಣಿಕೆ ಮಾಡಿ ನನ್ನ ವರದಿಯಲ್ಲಿ ನಮೂದಿಸಿಲ್ಲ. 1 ನೇ ಆರೋಪಿಯನ್ನು ನಮ್ಮ ವಶಕ್ಕೆ ಪಡೆದ ನಂತರ ಅವರ ಹೆಂಡತಿಗೆ ಮಾಹಿತಿ ನೀಡಿದ್ದೆ. ಈ ಬಗ್ಗೆ ನನ್ನ ವರದಿಯಲ್ಲಿ ತಿಳಿಸಿಲ್ಲ ಎಂದರೆ ಸರಿ.

ನಾನು ಹೇಳಿದಂತೆ 1 ನೇ ಆರೋಪಿಯನ್ನು ಪತ್ತೆ ಮಾಡಿಕೊಂಡು ಬರಲು ಹೋಗದ ಕಾರಣ ಯಾವ ವಾಹನ ಎಂದು ನನಗೆ ಹೇಳಲಾಗುತ್ತಿಲ್ಲ ಎಂದರೆ ಸರಿ ಅಲ್ಲ. ಕೌಲ ಬಜಾರ ಪೋ.ಠಾಣೆಯಿಂದ ಮಾಹಿತಿ ಪಡೆದು ಈ ಪ್ರಕರಣದಲ್ಲಿ ಸಿಲುಕಿಸಿದ್ದೇವೆ ಎಂದರೆ ಸರಿ ಅಲ್ಲ. 1 ನೇ ಆರೋಪಿಯ ವಶದಿಂದ ನಾನು ಯಾವುದೇ ಹಣ ಮತ್ತು ಆಭರಣ ಜಪ್ತಿ ಮಾಡಿಲ್ಲ ಎಂದರೆ ಸರಿ ಅಲ್ಲ. 1 ನೇ ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ **3** ನೇ ಆರೋಪಿ ಪರ ವಕೀಲರಿಂದ</u>

3 ನೇ ಆರೋಪಿ ಪರ ವಕೀಲರು 1 ಮತ್ತು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.1684/2022 CW-13 PW-4

| | | |
|---|---|---|
| ಹೆಸರು | : | ಎಮ್ ಡಿ ಆದಿಲ್ |
| ತಂದೆಯ/ಗಂಡನ ಹೆಸರು | : | ಅಜೀಜಸಾಬ |
| ವಯಸ್ಸು | : | 22 ವರ್ಷ |
| ಉದ್ಯೋಗ | : | ಬಂಗಾರ ಅಂಗಡಿಯಲ್ಲಿ ಕೆಲಸ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 04-07-2023

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ಒಂದುವರೆ ವರ್ಷದ ಹಿಂದೆ ಪೋಲೀಸರು ಒಂದು ದಿನ ನನ್ನನ್ನು ಪೋ.ಠಾಣೆಗೆ ಕರೆಸಿದ್ದರು. ಅಲ್ಲಿ ಬಂಗಾರವನ್ನು ಪರೀಕ್ಷಿಸಲು ಹೇಳಿದರು ಅದರಂತೆ ನಾನು ಪರೀಕ್ಷಿಸಿದ್ದೇನೆ. ಬಹಳ ಬಂಗಾರದ ಆಭರಣಗಳು ಇದ್ದ ಕಾರಣ ಅವುಗಳ ಬಗ್ಗೆ ಈಗ ನನಗೆ ಹೇಳಲಾಗುವುದಿಲ್ಲ. ಅವುಗಳನ್ನು ಯಾರ ಕಡೆಯಿಂದ ತೆಗೆದುಕೊಂಡಿದ್ದರು ನನಗೆ ಗೊತ್ತಿಲ್ಲ. ಅಲ್ಲಿ ಬೇರೆ ಯಾರು ಇರಲಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಆ ದಿನ ನಾನು ನೋಡಿರುವುದಿಲ್ಲ. ನನ್ನ ಸಮಕ್ಷಮ ಆರೋಪಿತರ ವಶದಿಂದ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ

ದಿಃ 17-01-2021 ರಂದು ನನ್ನನ್ನು, ಚಾಸಾ-4 ಮತ್ತು ಒಬ್ಬ ಮಲ್ಲಿನ ಸುರೇಶರವರನ್ನು ಚಾಸಾ-23 ರವರು ಕರೆಸಿದ್ದರು ಎಂದರೆ ಸರಿ ಅಲ್ಲ. ಅಲ್ಲಿ 1 ನೇ ಆರೋಪಿಯು ಇದ್ದ ಎಂದರೆ ಸರಿ ಅಲ್ಲ. ಆತ ಏನು ಹೇಳಿ ತೋರಿಸಿ ಹಾಜರಪಡಿಸಿದ್ದಾನೆ ಅದನ್ನು ಪರೀಕ್ಷಿಸುವಂತೆ ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿ ಅಲ್ಲ. 1 ನೇ ಆರೋಪಿಯು ತನ್ನ ಭಾಗಕ್ಕೆ ಬಂದ ಆಭರಣಗಳನ್ನು ತನ್ನ ಹತ್ತಿರ ಇದ್ದ ಬ್ಯಾಗ್‌ನಿಂದ ತೆಗೆದು ಹಾಜರಪಡಿಸಿದ ಎಂದರೆ ಸರಿ ಅಲ್ಲ. ಅವುಗಳನ್ನು

ನಾನು ಪರೀಕ್ಷಿಸಿದಾಗ ಒಂದು ಬಂಗಾರದ ಹರಳಿನ ನೆಕಲೆಸ್, ಬಂಗಾರದ ಮಂಗಳಸೂತ್ರ, ಇನ್ನೊಂದು ಬಂಗಾರದ ನೆಕಲೆಸ್, ಒಂದು ಜೊತೆ ಬಂಗಾರದ ಕಿವಿಯೊಲೆ, ಒಂದು ಬಂಗಾರದ ಅಂಜು ಉಂಗುರ ಇದ್ದವು ಎಂದರೆ ಸರಿ ಅಲ್ಲ. ಈ ಬಗ್ಗೆ ಪೋಲೀಸರು ಬೆಳಿಗ್ಗೆ 9-10 ರಿಂದ 10-10 ಗಂಟೆಯವರೆಗೆ ಪಂಚನಾಮೆ ಜರುಗಿಸಿದರು ಎಂದರೆ ಸರಿ ಅಲ್ಲ. ಈ ಬಗ್ಗೆ ನಾನು ಹೇಳಿಕೆ ಮತ್ತು ಪುರವಣಿ ಹೇಳಿಕೆಗಳನ್ನು ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆ ಮತ್ತು ಪುರವಣಿ ಹೇಳಿಕೆ ಭಾಗಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು. ಈಗ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿ ಪರ ವಕೀಲರಿಂದ

ಇರುವುದಿಲ್ಲ.

ಪಾಟೀ ಸವಾಲುಃ **3** ನೇ ಆರೋಪಿ ಪರ ವಕೀಲರಿಂದ

ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.1684/2022 CW-20 PW-3

ಹೆಸರು : ಶರಬಣ್ಣ
ತಂದೆಯ/ಗಂಡನ ಹೆಸರು : ಹನಮಂತ
ವಯಸ್ಸು : 39 ವರ್ಷ
ಉದ್ಯೋಗ : ಎ ಎಸ್ ಐ
ವಾಸಸ್ಥಳ : ಸಿಂಧನೂರು

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 04-07-2023

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ದಿಃ 01-08-2020 ರಿಂದ ಇಲ್ಲಿಯವರೆಗೆ ತುರವಿಹಾಳ ಪೋ.ಠಾಣೆಯಲ್ಲಿ ಎ ಎಸ್ ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 18-01-2022 ರಂದು ಚಾಸಾ-23 ರವರ ಆದೇಶದ ಮೇರೆಗೆ ಈ ಪ್ರಕರಣದ 2 ಮತ್ತು 3 ನೇ ಆರೋಪಿತರನ್ನು ಕರೆದುಕೊಂಡು ಬಂದು ಹಾಜರಪಡಿಸುವಂತೆ ತಿಳಿಸಿದರು. ಅದರಂತೆ ನಾನು ದಿಃ 19-01-2022 ರಂದು ಬೆಳಗಿನ ಜಾವ 3-00 ಗಂಟೆ ಸುಮಾರಿಗೆ ನಾನು, ಚಾಸಾ-15 ರಿಂದ 17 ರವರು ಸೇರಿ ಒಂದು ಖಾಸಗಿ ಜೀಪ್‌ನಲ್ಲಿ ಬಳ್ಳಾರಿಯ ಕೌಲ್ ಬಜಾರಗೆ ಹೋದೆವು. ಅಲ್ಲಿ 2 ನೇ ಆರೋಪಿಯ ವಿವರವನ್ನು ಪರೀಶೀಲನೆ ಮಾಡಿದೆವು. ಆರೋಪಿತರ ಬಗ್ಗೆ ತಪಾಸಣೆ ಮಾಡುತ್ತಿದ್ದಾಗ ಒಂದು ಟೀ ಅಂಗಡಿ ಬಳಿ 2 ಜನ ವ್ಯಕ್ತಿಗಳು ಅನುಮಾನಾಸ್ಪದವಾಗಿ ನಿಂತಿದ್ದರು, ಅವರನ್ನು ಹಿಡಿದುಕೊಂಡು ವಿಚಾರಿಸಲಾಗಿ 2 ಮತ್ತು 3 ನೇ ಆರೋಪಿತರು ಎಂದು ಗೊತ್ತಾಯಿತು. ಅವರನ್ನು ಕರೆದುಕೊಂಡು ಬಂದು ಚಾಸಾ-23 ರವರ ಮುಂದೆ ಹಾಜರಪಡಿಸಿದ್ದೇನೆ. ಈ ಬಗ್ಗೆ ನಾನು ತನಿಖಾಧಿಕಾರಿಗೆ ವರದಿ ನೀಡಿದ್ದೇನೆ. ಸಾಕ್ಷಿಯು ಆ ವರದಿಯ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು. 2 ಮತ್ತು 3 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. (1 ಮತ್ತು 2 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರರಿರುತ್ತಾರೆ 3 ನೇ ಆರೋಪಿ ಗೈರು ಹಾಜರಿದ್ದು ಅವರ ಹಾಜರಾತಿಯನ್ನು ಮನ್ನಾ ಮಾಡಲಾಗಿದೆ). ಸಾಕ್ಷಿಯು 1 ಮತ್ತು 2 ನೇ ಆರೋಪಿತರನ್ನು 2 ಮತ್ತು 3 ನೇ ಆರೋಪಿತರು ಎಂದು ಗುರುತಿಸಿದ್ದಾರೆ.

<u>ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿ ಪರ ವಕೀಲರಿಂದ</u>

ಖಾಸಗಿ ಜೀಪ್ ಯಾವ ವಾಹನ ಮತ್ತು ಅದರ ಚಾಲಕ ಯಾರು ಇದ್ದರು ನನಗೆ ನೆನಪಿಲ್ಲ. 2022 ನೇ ಸಾಲಿನಲ್ಲಿ ಯಾವುದೇ ಜೀಪ್‌ಗಳು ಬಾಡಿಗೆಗೆ ಇರಲಿಲ್ಲ ಎಂದರೆ ಸರಿ ಅಲ್ಲ. ಬೆಳಗಿನ ಜಾವ 5-00 ಗಂಟೆ ಸುಮಾರಿಗೆ ಬಳ್ಳಾರಿಗೆ ಹೋಗಿದ್ದೆವು. ಕೌಲ ಬಜಾರ ಪೋ.ಠಾಣೆಯಲ್ಲಿ ಆರೋಪಿತರ ಎಮ್ ಓ ಬಿ ಯನ್ನು ಯಾರು ತೋರಿಸಿದರು ನನಗೆ ನೆನಪಿಲ್ಲ.

ಯಾರ ಟೀ ಅಂಗಡಿಯ ಮುಂದೆ ಆರೋಪಿತರು ನಿಂತಿದ್ದರು ಅವರ ಅಂಗಡಿಯವರ ಹೆಸರು ನನಗೆ ಗೊತ್ತಿಲ್ಲ. ಕೌಲ ಬಜಾರ ಪೋ.ಠಾಣೆಯಿಂದ ಟೀ ಅಂಗಡಿ ಯಾವ ಭಾಗಕ್ಕೆ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ಕೌಲ ಬಜಾರ ಪೋ.ಠಾಣಾ ವ್ಯಾಪ್ತಿಯಲ್ಲಿ ರಸ್ತೆ ಪಕ್ಕದಲ್ಲಿ ಯಾವುದೇ ಟೀ ಅಂಗಡಿ ಇಲ್ಲ ಎಂದರೆ ಸರಿ ಅಲ್ಲ. ಆರೋಪಿತರ ಎಮ್ ಓ ಬಿ ಕಾರ್ಡ್‌ನ್ನು ನೋಡಿದ್ದರಿಂದ 2 ಮತ್ತು 3 ನೇ ಆರೋಪಿತರ ಬಗ್ಗೆ ಅನುಮಾನ ಬಂದಿತ್ತು.

ನ್ಯಾಯಾಲಯದ ಮುಂದಿರುವ ಆರೋಪಿತರು ಇದೇ ವ್ಯಕ್ತಿ, ಇದೇ ಹೆಸರಿನವರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ ಅಲ್ಲ. ಸಾಕ್ಷಿಯು ಬಹಳ ದಿನಗಳಾಗಿದ್ದರಿಂದ ಅವರನ್ನು ನೋಡಿ ಗುರುತಿಸಿ ಹೆಸರನ್ನು ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಆರೋಪಿತರನ್ನು ಹಿಡಿದುಕೊಂಡು ಬಂದು ಚಾಸಾ-23 ರವರ ಮುಂದೆ ಹಾಜರಪಡಿಸಿಲ್ಲ, ಹಾಗಾಗಿ ಆರೋಪಿತರನ್ನು ಗುರುತಿಸಲು ಆಗುತ್ತಿಲ್ಲ ಎಂದರೆ ಸರಿ ಅಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ನಿಪಿ-7 ರಂತೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ **3** ನೇ ಆರೋಪಿ ಪರ ವಕೀಲರಿಂದ</u>

3 ನೇ ಆರೋಪಿ ಪರ ವಕೀಲರು 1 ಮತ್ತು 2 ನೇ ಆರೋಪಿತರ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.